ಅ) ಬೀದರ್ ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ:

1) ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (S.G.S.Y.) ಇದಕ್ಕಾಗಿ ಲಭ್ಯವಿರುವ ಅನುದಾನದ ವಿವರಗಳನ್ನು ಇದರ ಕೆಳಗೆ ನೀಡಿದೆ:

ವರ್ಷ	ಅನುದಾನ (ಲಕ್ಷ ರೂ.ಗಳಲ್ಲಿ)		
	ಕೇಂದ್ರ	ರಾಜ್ಯ	ಒಟ್ಟು
2009–10	322.90	107.65	430.61

2) ಬೀದರ ಜಿಲ್ಲೆಯು ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಲಾಗಿರುವ ಹುಮನಾಬಾದ್, ಭಾಲ್ಕಿ, ಔರಾದ್ ಮತ್ತು ಬಸವಕಲ್ಯಾಣ ತಾಲ್ಲೂಕುಗಳಲ್ಲಿನ 142 ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಸ್ವರಾಜ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಉದ್ದೇಶಕ್ಕಾಗಿ 2009–10ನೇ ಸಾಲಿಗೆ ಒಟ್ಟು 116.74 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

3) ತಲಾ 16.00 ಲಕ್ಷ ರೂ.ಗಳ ನೆರವಿನಿಂದ ಜಿಲ್ಲೆಯ ಎಲ್ಲಾ ಐದು ತಾಲ್ಲೂಕು ಕೇಂದ್ರಗಳಲ್ಲಿ ಸಾಮರ್ಥ್ಯ ಸೌಧ ಕಟ್ಟಡಗಳನ್ನು ನಿರ್ಮಾಣ ಮಾಡಲಾಗುತ್ತಿದೆ.

ಆ) ಬಂದಿದೆ.

ಇ) ರಾಯಚೂರು ಕೃಷಿ ವಿಶ್ವವಿದ್ಯಾಲಯವು ಬೀದರ್‌ಗೆ ಅತೀ ಸಮೀಪದಲ್ಲಿರುವುದರಿಂದ ಇನ್ನೊಂದು ಕೃಷಿ ವಿಶ್ವವಿದ್ಯಾಲಯವನ್ನು ಬೀದರ್‌ನಲ್ಲಿ ಸ್ಥಾಪಿಸುವ ಅವಶ್ಯಕತೆ ಕಂಡು ಬರುತ್ತಿಲ್ಲ.

1127 ಶ್ರೀ ರಘುಪತಿ ಭಟ್ ಕೆ. (ಉಡುಪಿ) ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಮಲ್ಪೆ ಬಂದರು ಮೂರನೇ ಹಂತದ (3rd stage) ಅಭಿವೃದ್ಧಿ ಕಾಮಗಾರಿಯ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಆ) ಈ ಕಾಮಗಾರಿಗೆ ತಗಲಬಹುದಾದ ಅಂದಾಜು ವೆಚ್ಚ ಎಷ್ಟು;

ಇ) ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಲಾದ ಅನುದಾನವೆಷ್ಟು;

ಈ) ಕಾಮಗಾರಿಗಳನ್ನು ಕೂಡಲೇ ಕೈಗೊಳ್ಳಲು ಇರುವ ತೊಂದರೆಗಳೇನು;

ಉ) ಸದರಿ ಬಂದರಿನ 3ನೇ ಹಂತದ ಕಾಮಗಾರಿಯನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಆನಂದ ವಸಂತ ಅಸ್ನೋಟಿಕರ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ಮಲ್ಪೆ ಮೀನುಗಾರಿಕೆ ಬಂದರಿನ ಮೂರನೆ ಹಂತದ ವಿಸ್ತರಣೆಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರದ Standing Evaluation Committee ಯಿಂದ ತಾತ್ವಿಕ ಒಪ್ಪಿಗೆಯನ್ನು ಏಪ್ರಿಲ್ 2009ರಲ್ಲಿ ಪಡೆಯಲಾಗಿದೆ. Techno-Economic Feasibility Report ಮತ್ತು ಅಗತ್ಯವಾದ ಶೋಧನೆಗಳನ್ನು (investigations) ಕೈಗೊಂಡು ಸವಿವರ ಯೋಜನಾ ವರದಿಯನ್ನು (Detailed Project Report) ತಯಾರಿಸುವಂತೆ ಕೇಂದ್ರ ಸರ್ಕಾರವು ಸಿ.ಐ.ಸಿ.ಇ.ಎಫ್., ಬೆಂಗಳೂರು ಸಂಸ್ಥೆಗೆ ತಿಳಿಸಿದ ಮೇರೆಗೆ, ಸದರಿ ಸಂಸ್ಥೆಯು ಅಧ್ಯಯನ ಕೈಗೊಂಡಿದ್ದು ಬಂದರಿನ Layout Plan ಸಿದ್ಧಪಡಿಸಿ ಕಳುಹಿಸಿದ್ದಾರೆ. ಇದನ್ನು ಜನಪ್ರತಿನಿಧಿಗಳ, ಸ್ಥಳೀಯ ಮೀನುಗಾರರ, ಅಧಿಕಾರಿಗಳ ಮತ್ತು ಇಂಜಿನಿಯರ್‌ಗಳ ಸಭೆ ಕರೆದು, ಚರ್ಚಿಸಿ ಅಂತಿಮಗೊಳಿಸಬೇಕಾಗಿರುತ್ತದೆ. ತದನಂತರ, ಅವರು ವಿವಿಧ ಘಟಕಗಳ ವಿನ್ಯಾಸಗಳನ್ನು ತಯಾರಿಸಿ ನೀಡಲಿದ್ದು ಅದರಂತೆ ಅಂದಾಜು ಪಟ್ಟಿಗಳನ್ನು ಬಂದರು ಇಲಾಖಾ ಅಭಿಯಂತರುಗಳು ತಯಾರಿಸಬೇಕಿರುತ್ತದೆ. ಈ ನಡುವೆ ಈ ಬಂದರು ನಿರ್ಮಾಣದಿಂದ ಪರಿಸರಕ್ಕೆ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಅಧ್ಯಯನ ನಡೆಸಿ, ವರದಿ ನೀಡಲು ಸಂಸ್ಥೆಯೊಂದಕ್ಕೆ ಜವಾಬ್ದಾರಿ ವಹಿಸಲಾಗಿದೆ.

ಆ) ಮೇಲ್ಕಂಡ ಕಾರಣಗಳಿಗಾಗಿ ಈ ಯೋಜನೆಗೆ ತಗಲುವ ಅಂದಾಜು ವೆಚ್ಚವನ್ನು ಇನ್ನೂ ತಯಾರಿಸಿರುವುದಿಲ್ಲ.

ಇ) ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಮಲ್ಪೆ 3ನೇ ಹಂತದ ಮೀನುಗಾರಿಕೆ ಬಂದರಿನ ವಿಸ್ತರಣೆಗಾಗಿ ರೂ. 591.50 ಲಕ್ಷ ಅನುದಾನವನ್ನು ಒದಗಿಸಲಾಗಿದೆ.

ಈ) ತೊಂದರೆಗಳೇನೂ ಇರುವುದಿಲ್ಲ. ಯಾವುದೇ ಯೋಜನೆಯನ್ನು ರೂಪಿಸುವಾಗ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಹಾಗೂ ಮೀನುಗಾರಿಕೆಗೆ ಉಪಯುಕ್ತವಾಗುವ ನಿಟ್ಟಿನಲ್ಲಿ ಅಗತ್ಯವಾದ ಸೌಲಭ್ಯಗಳನ್ನು ಯೋಜನೆಯಲ್ಲಿ ಅಳವಡಿಸಿಕೊಂಡು ವ್ಯವಸ್ಥಿತವಾಗಿ ಮುಂದುವರಿಯ

ಬೇಕಾಗುತ್ತದೆ. ಇದು ಸಾಕಷ್ಟು ಕಾಲಾವಕಾಶವನ್ನು ತೆಗೆದುಕೊಳ್ಳುತ್ತದೆ. ಆದಷ್ಟು ಬೇಗ ಯೋಜನಾ ವರದಿಯನ್ನು ತಯಾರಿಸಿ, ಕೇಂದ್ರ ಸರ್ಕಾರದ ಅನುದಾನ ಪಡೆದು ಕಾಮಗಾರಿ ಕೈಗೊಳ್ಳಲಾಗುವುದು.

ಉ) ಯೋಜನಾ ವರದಿ ತಯಾರಿ ಮತ್ತು ಸರ್ಕಾರಗಳ ವಿವಿಧ ಹಂತಗಳಲ್ಲಿ ಮಂಜೂರಾತಿ/ತೀರ್ಮಾನ ಕೈಗೊಳ್ಳಬೇಕಾಗಿರುವುದರಿಂದ, ಪ್ರಸ್ತುತ ಹಂತದಲ್ಲಿ ಕಾಮಗಾರಿ ಪ್ರಾರಂಭಿಸಿ ಪೂರ್ಣಗೊಳಿಸುವ ಬಗ್ಗೆ ನಿಖರವಾಗಿ ಹೇಳಲು ಬರುವುದಿಲ್ಲ.

1232 ಶ್ರೀ ಪುಟ್ಟರಂಗಶೆಟ್ಟಿ ಸಿ. ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಎರಡು ವರ್ಷಗಳಲ್ಲಿ ಚಾಮರಾಜನಗರದಲ್ಲಿ ರೈತರಿಗೆ ಬಿಡುಗಡೆಯಾದ ರಸಗೊಬ್ಬರ ಎಷ್ಟು; ವಿತರಣೆ ಮಾಡಲಾದ ರಸಗೊಬ್ಬರ ಎಷ್ಟು;

ಆ) ಅಸಮರ್ಪಕವಾಗಿ ದಾಸ್ತಾನು ವಿತರಣೆ ಮಾಡಿದವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು)

ಅ) ಕಳೆದ ಎರಡು ವರ್ಷಗಳಲ್ಲಿ (2007–08 ಮತ್ತು 2008–09) ಚಾಮರಾಜನಗರ ಜಿಲ್ಲೆಗೆ ಇದ್ದ ಬೇಡಿಕೆ ಮತ್ತು ಸರಬರಾಜಾದ ರಸಗೊಬ್ಬರ ಪ್ರಮಾಣ ಈ ಕೆಳಕಂಡಂತಿದೆ:

(ಪ್ರಮಾಣ ಟನ್‌ಗಳಲ್ಲಿ)

ರಸಗೊಬ್ಬರ	2007–08		2008–09	
	ಬೇಡಿಕೆ	ಸರಬರಾಜು	ಬೇಡಿಕೆ	ಸರಬರಾಜು
ಡಿ.ಎ.ಪಿ.	9000	5924	8434	12507
ಎಂ.ಒ.ಪಿ	10270	10347	17864	18248
ಎನ್.ಪಿ.ಕೆ.	15200	7421	10879	7759
ಯೂರಿಯಾ	22100	18034	32110	22762
ಒಟ್ಟು	**56570**	**41726**	**69287**	**61276**

ಆ) ಜಿಲ್ಲಾಧಿಕಾರಿಯ ಉಸ್ತುವಾರಿಯಲ್ಲಿ ಸಮರ್ಪಕವಾಗಿ ರಸಗೊಬ್ಬರ ವಿತರಣೆ ಮಾಡಲು ಕ್ರಮವನ್ನು ಕೈಗೊಂಡಿರುತ್ತದೆ. ಆದಾಗ್ಯೂ, ಇಂತಹ